# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಬಿ12(6)ಪಿಆರ್/ಇ-42300/23-24

ಆಯುಕ್ತರವರ ಕಛೇರಿ
ಬೃಹತ್ ಮಹಾನಗರ ಪಾಲಿಕೆ ಕಛೇರಿಗಳು,
ಬೆಂಗಳೂರು, ದಿನಾಂಕ: 25.10.23

**ಕಛೇರಿ ಆದೇಶ**

ವಿಷಯ: ಶ್ರೀ ಯೋಗೇಶ್ ಕೆ. ಪಿ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಇವರನ್ನು ಪಾಲಿಕೆಯ ಸೇವೆಯಿಂದ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ: 1) ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆ ಸಂಖ್ಯೆ: ನಅಇ 373 ಎಂ.ಎನ್.ಯು 2023, ದಿನಾಂಕ: 06-10-2023
2) ಸಂಖ್ಯೆ: ಬಿ12(6)ಪಿಆರ್/56/23-24, ದಿನಾಂಕ: 05-07-2023ರ ಸುತ್ತೋಲೆ

----------

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಶ್ರೀ ಯೋಗೇಶ್ ಕೆ. ಪಿ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆಯಿಂದ ಎರವಲು ಸೇವೆಯ ಮೇಲೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ರಾಜಾಜಿನಗರ) ಉಪ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಇವರನ್ನು ಉಲ್ಲೇಖ-(1)ರ ಅಧಿಸೂಚನೆಯಲ್ಲಿ ಇವರ ನಿಯೋಜನಾ ಅವಧಿಯು ಮುಕ್ತಾಯಗೊಂಡಿರುವುದರಿಂದ ಮಾತೃ ಇಲಾಖೆಗೆ ಹಿಂದಿರುಗಿಸಿ ಆದೇಶಿಸಿರುವುದನ್ನು ಪರಿಗಣಿಸಿ, ಸದರಿಯವರನ್ನು ದಿನಾಂಕ: 26-10-2023ರ ಅಪರಾಹ್ನದಿಂದ ಅನ್ವಯವಾಗುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸೇವೆಯಿಂದ ಬಿಡುಗಡೆಗೊಳಿಸಿ ಆದೇಶಿಸಿದೆ.

**ಷರತ್ತುಗಳು:-**

1. ಸದರಿ ಅಭಿಯಂತರರು ನಗರ ಪಾಲಿಕೆಯ ಸೇವಾ ಅವಧಿಯಲ್ಲಿ ನಗರ ಪಾಲಿಕೆಗೆ ಯಾವುದೇ ಆರ್ಥಿಕ ಬಾಕಿಯನ್ನು ಉಳಿಸಿಕೊಂಡಿದ್ದಲ್ಲಿ ಸದರಿಯವರಿಂದ ವಸೂಲಾತಿ ಮಾಡುವ ಷರತ್ತಿಗೊಳಪಡಿಸಿದೆ.
2. ಸದರಿ ಅಭಿಯಂತರರ ವಿರುದ್ಧ ಇಲಾಖಾ ವಿಚಾರಣೆ ಬಾಕಿ ಇದ್ದಲ್ಲಿ ನಿಯಮಾನುಸಾರ ಕ್ರಮಜರುಗಿಸುವ ಷರತ್ತಿಗೊಳಪಡಿಸಿದೆ.
3. ಪಾಲಿಕೆಯ ಹಿಂದಿನ ವರ್ಷಗಳ ಆಡಿಟ್ ವರದಿಗಳಲ್ಲಿ ಯಾವುದೇ ಆರ್ಥಿಕ ಬಾಕಿಯನ್ನು ಸದರಿಯವರಿಂದ ವಸೂಲಾತಿ ಮಾಡಲು ಸೂಚಿಸಿದಲ್ಲಿ, ಅಂತಹ ಮೊತ್ತವನ್ನು ವಸೂಲಾತಿ ಮಾಡುವ ಷರತ್ತಿಗೊಳಪಡಿಸಿದೆ ಹಾಗೂ ಆಕ್ಷೇಪಣೆಗಳಿದ್ದಲ್ಲಿ ಅವುಗಳಿಗೆ ಸಮರ್ಪಕ ಉತ್ತರ ನೀಡುವ ಷರತ್ತು ವಿಧಿಸಿದೆ.
4. ಸದರಿಅಭಿಯಂತರರು ನಗರ ಪಾಲಿಕೆಯ ವಸತಿಗೃಹದಲ್ಲಿ ವಾಸಿಸುತ್ತಿದ್ದಲ್ಲಿ ಕೂಡಲೇ ತೆರವುಗೊಳಿಸುವ ಷರತ್ತಿಗೊಳಪಡಿಸಿದೆ.
5. ವಾಕಿ ಟಾಕಿ, ಮೊಬೈಲ್ ಫೋನ್, ಸಿಮ್‌ಕಾರ್ಡ್, ಹೆಲ್ಮ್ಯಾರ್ಡ್, ಗುರುತಿನ ಚೀಟಿ (Identity card) ಹಾಗೂ ಲ್ಯಾಪ್‌ಟಾಪ್‌ಗಳನ್ನು ಪಾಲಿಕೆಯಿಂದ ಪಡೆದಿದ್ದಲ್ಲಿ ಇವುಗಳನ್ನು ಪಾಲಿಕೆಗೆ ಹಿಂದಿರುಗಿಸುವ ಷರತ್ತಿಗೊಳಪಡಿಸಿದೆ.

ಮೇಲ್ಕಂಡ ಆದೇಶದನ್ವಯ ಹಾಗೂ ಮಾನ್ಯ ಮುಖ್ಯ ಆಯುಕ್ತರು ರವರ ಉಲ್ಲೇಖ-(2)ರ ಸುತ್ತೋಲೆಯನ್ವಯ ಸಂಬಂಧಪಟ್ಟ ಬಟವಾಡೆ ಅಧಿಕಾರಿಗಳು ಅಗತ್ಯ ಕ್ರಮ ಕೈಗೊಳ್ಳುವುದು.

ಉಪ ಮುಖ್ಯ ಮಾಹಿತಿ ಅಧಿಕಾರಿ
(ಮಾಹಿತಿ ತಂತ್ರಜ್ಞಾನ) ರವರ ಕಛೇರಿ
ಸಂಖ್ಯೆ: 772
ದಿನಾಂಕ: 26/10/2023
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಎನ್.ಆರ್.ಸ್ಕ್ವೇರ್, ಬೆಂಗಳೂರು

ಮಾನ್ಯ ಮುಖ್ಯ ಆಯುಕ್ತರು ರವರ
ಆದೇಶದ ಮೇರೆಗೆ)

25/10
ಉಪ ಆಯುಕ್ತರು (ಆಡಳಿತ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
25/10/2023 25/10/23

**ಪ್ರತಿಯನ್ನು :**

: ಮಾನ್ಯ ಆಡಳಿತಗಾರರು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
: ಮಾನ್ಯ ಮುಖ್ಯ ಆಯುಕ್ತರು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ
: ವಿಶೇಷ ಆಯುಕ್ತರು (ಯೋಜನೆ) / ವಿಶೇಷ ಆಯುಕ್ತರು (ಆಡಳಿತ) ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
: ವಲಯ ಆಯುಕ್ತರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
: ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ರವರಿಗೆ ಕಳುಹಿಸಿದೆ.
: ಸರ್ಕಾರದ ಅಧೀನ ಕಾರ್ಯದರ್ಶಿಗಳು, ಲೋಕೋಪಯೋಗಿ ಬಂದರುಗಳು ಮತ್ತು ಒಳನಾಡು ಜಲಸಾರಿಗೆ ಇಲಾಖೆ ರವರಿಗೆ ಕಳುಹಿಸಿದೆ.
: ಜಂಟಿ ಆಯುಕ್ತರು (ಪಶ್ಚಿಮ) ವಲಯ ರವರಿಗೆ ಕಳುಹಿಸಿದೆ.
: ಪ್ರಧಾನ ಅಭಿಯಂತರರು / ಮುಖ್ಯ ಅಭಿಯಂತರರು (ಪಶ್ಚಿಮ) ವಲಯ ರವರಿಗೆ ಕಳುಹಿಸಿದೆ.
: ನಿರ್ದೇಶಕರು, ಮಾಹಿತಿ ತಂತ್ರಜ್ಞಾನ / ಮುಖ್ಯ ಮಾಹಿತಿ ಅಧಿಕಾರಿ ರವರಿಗೆ ಕಳುಹಿಸುತ್ತಾ, ಸದರಿಯವರು ಮೊಬೈಲ್ ಫೋನ್, ಮತ್ತು ಸಿಮ್‌ಕಾರ್ಡ್ ಅನ್ನು ಪಾಲಿಕೆಗೆ ಹಿಂದಿರುಗಿಸಿರುವ ಬಗ್ಗೆ ದೃಢೀಕರಿಸಿಕೊಳ್ಳುವುದು.
: ಕಾರ್ಯಪಾಲಕ ಅಭಿಯಂತರರು (ರಾಜಾಜಿನಗರ) / ಸ.ಕಾ.ನಿ.ಅ (ರಾಜಾಜಿನಗರ) ಉಪ ವಿಭಾಗ ರವರಿಗೆ ಕಳುಹಿಸಿದೆ.
: ಮು.ಲೆ.ಅ / ಮು.ಲೆ.ಪ ರವರಿಗೆ ರವರಿಗೆ /ಉ.ನಿ (ಹಣಕಾಸು-ಪಶ್ಚಿಮ) ರವರಿಗೆ ಕಳುಹಿಸಿದೆ.
: ಸಂಬಂಧಪಟ್ಟ ಅಭಿಯಂತರರಿಗೆ / ಕಛೇರಿ ಪ್ರತಿ.